ಸಾಕ್ಷಿಗೆ ದಿನಾಂಕಃ **3.6.2026** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಃಮುಂದುವರೆದ ಮುಖ್ಯ ವಿಚಾರಣೆಃ ಫಿರ್ಯಾದುದಾರರ ಪರ ಶ್ರೀ. ಕೆ ಎಸ್ ಎಸ್ ವಕೀಲರಿಂದಃಃ

2014 ನೇ ಇಸವಿ ಆಗಸ್ಟ್ ತಿಂಗಳಿನಲ್ಲಿ ಸ್ಟಾರ್ ಆಫ್ ಶಿವಮೊಗ್ಗ ಕನ್ನಡ ವಾರಪತ್ರಿಕೆಯ ಪ್ರಕಟಣೆಯಲ್ಲಿ ನನ್ನ ವಿರುದ್ಧ ಶಂಕರಾಪುರ ಮಧುಕರಕರಶೆಟ್ಟಿಯ ಅಟ್ಟಹಾಸ ಎಗ್ಗಿಲ್ಲದಂತೆ ಸಾಗುತ್ತಿದೆ ಎಂಬ ಶೀರ್ಷಿಕೆಯಡಿ ನನ್ನ ವಿರುದ್ಧ ಲೇಖನವನ್ನು 1 ನೇ ಆರೋಪಿತರ ಮಾಲೀಕತ್ವ ಮತ್ತು ಸಂಪಾದಕತ್ವದಲ್ಲಿ ನಡೆಯುತ್ತಿರುವ ಸ್ಟಾರ್ ಆಫ್ ಶಿವಮೊಗ್ಗ ಪತ್ರಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ. ಈಗ ಸಾಕ್ಷಿಯು ಸದರಿ ದಿನಾಂಕಃ 12.8.2014 ರ ಸ್ಟಾರ್ ಆಫ್ ಶಿವಮೊಗ್ಗ ಕನ್ನಡ ವಾರಪತ್ರಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಮತ್ತು ಸದರಿ ಪತ್ರಿಕೆಯಲ್ಲಿ ಪ್ರಕಟಣೆಯಾಗಿರುವ ಪುಟ ಸಂಃ 11 ರಲ್ಲಿರುವ ಪ್ರಕಟಣೆಯನ್ನು ನೋಡಿ ಗುರುತಿಸಿದ್ದು, ಸದರಿ ಪ್ರಕಟಣೆಯ ಭಾಗಾಂಶವನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸದರಿ ಪತ್ರಿಕೆಯ ವರದಿಯಲ್ಲಿ ನನ್ನ ಮಾನಹಾನಿಯಾಗಿದ್ದು, ಸಮಾಜದಲ್ಲಿ ನನ್ನ ಗೌರವಕ್ಕೆ ಚ್ಯುತಿ ಬಂದಿರುತ್ತದೆ. ಸದರಿ ಅವಹೇಳನಕಾರಿ ಲೇಖನದ ಪ್ರಕಟಣೆಯಿಂದ ನನಗೆ ಮತ್ತು ನಮ್ಮ ಕುಟುಂಬದ ಗೌರವಕ್ಕೆ ಧಕ್ಕೆಯಾಗಿರುತ್ತದೆ. ಸದರಿ ಪ್ರಕಟಣೆಯಲ್ಲಿ ನಾನು ಅಕ್ರಮವಾಗಿ ಸಾಗುವಾನಿ ಮರಗಳನ್ನು ಅರಣ್ಯದಿಂದ ಕತ್ತರಿಸಿ ಪೀಠೋಪಕರಣಗಳನ್ನು ಮಾಡಿ ಅಕ್ರಮವಾಗಿ ಲಾಭ ಗಳಿಸುತ್ತಿರುವುದಾಗಿ ಸುಳ್ಳು ವಿಚಾರಗಳನ್ನು ಪ್ರಕಟಿಸಿರುತ್ತಾರೆ.

ಸಾಕ್ಷಿಯು ದಿನಾಂಕಃ 5.3.2014 ರಂದು ವಲಯಾರಣ್ಯಾಧಿಕಾರಿ, ನ ರಾ ಪುರ ವಲಯ ರವರು ನೀಡಿರುವಂತೆ ನನ್ನ ವಿರುದ್ಧ ದಿನಾಂಕಃ 31.12.2013 ರವರೆವಿಗೂ ಯಾವುದೇ ಅರಣ್ಯ ಪ್ರದೇಶದ ಒತ್ತುವರಿ, ಮರಕಳ್ಳ ಸಾಗಾಣಿಕೆ ಹಾಗೂ ಪ್ರಾಣಿಗಳ ಮಾಂಸ ಮಾರಾಟದ ವಿಚಾರವಾಗಿ ಪ್ರಕರಣ ದಾಖಲಾಗಿರುವುದಿಲ್ಲ ಎಂದು ಮಾಹಿತಿ ಹಕ್ಕಿನಡಿಯಲ್ಲಿ ನೀಡಿರುವ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

ದಿನಾಂಕಃ 10.3.2014 ರಂದು ತಹಶೀಲ್ದಾರ್ ಕಾರ್ಯಾಲಯ, ನ ರಾ ಪುರ ರವರು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ನೀಡಿರುವಂತೆ ದಿನಾಂಕಃ 31.12.2013 ರವರೆವಿಗೂ ನನ್ನ ವಿರುದ್ಧ ಯಾವುದೇ ಅಕ್ರಮ ಮರಳು ಸಾಗಾಣಿಕೆ ಬಗ್ಗೆ ಪ್ರಕರಣ ದಾಖಲಾಗಿರುವುದಿಲ್ಲ ಎಂದು ನೀಡಿರುವ ದಾಖಲೆಯಾಗಿರುತ್ತದೆ ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

ದಿನಾಂಕಃ 4.3.2014 ರಂದು ಸಹಾಯಕ ನಿಬಂಧಕರು ಸಹಕಾರ ಸಂಘ, ತರೀಕೆರೆ ಉಪವಿಭಾಗ ರವರು ಮಾಹಿತಿ ಹಕ್ಕು ಕಾಯ್ದೆಯಡಿ ನೀಡಿರುವಂತೆ ದಿನಾಂಕಃ 31.12.2013 ರವರೆವಿಗೂ ನನ್ನ ವಿರುದ್ಧ ಯಾವುದೇ ಪ್ರಕರಣ,ದೂರು ಅರ್ಜಿ, ಮೂಖರ್ಜಿ ದಾಖಲಾಗಿರುವುದಿಲ್ಲ ಎಂದು ತಿಳಿಸಲಾಗಿರುತ್ತದೆ ಸದರಿ ದಾಖಲೆಯನ್ನು ನಿಪಿ-10 ಎಂದು ಗುರುತಿಸಲಾಯಿತು.

ದಿನಾಂಕಃ 2.3.2014 ರ ಹಿಂಬರಹವನ್ನು ಹಾಜರುಪಡಿಸಿದ್ದು ಸದರಿ ಹಿಂಬರಹವನ್ನು ಪಿ ಎಸ್ ಐ, ನ ರಾ ಪುರ ರವರು ನನ್ನ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣ ದಾಖಲಾಗಿರುವುದಿಲ್ಲ ಎಂದು ಹಿಂಬರಹ ನೀಡಿರುತ್ತಾರೆ. ಸದರಿ ದಾಖಲೆಯನ್ನು ನಿಪಿ-11 ಎಂದು ಗುರುತಿಸಲಾಯಿತು.

ಸದರಿ ಸುಳ್ಳು ಮತ್ತು ಅವಹೇಳನಕಾರಿ ಪ್ರಕಟಣೆಯನ್ನು ಸ್ಟಾರ್ ಆಫ್ ಶಿವಮೊಗ್ಗ ಕನ್ನಡ ವಾರಪತ್ರಿಕೆಯಲ್ಲಿ ಪ್ರಕಟಿಸಿರುವ 1 ನೇ ಆರೋಪಿತರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕಾಗಿ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಸದರಿ 1 ನೇ ಆರೋಪಿತರಿಗೆ ಸುಳ್ಳು ಮಾಹಿತಿಯನ್ನು ನೀಡಿದ 2 ಮತ್ತು 3 ನೇ ಆರೋಪಿತರ ವಿರುದ್ಧವೂ ಸಹ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕಾಗಿ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲು **1** ನೇ ಆರೋಪಿ ಪರ ವಕೀಲರು ಮತ್ತು **3** ನೇ ಆರೋಪಿತರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸ ಇ ಎ ಒ

Sd/-
ಪ್ರ.ದ.ನ್ಯಾ.ದಂ., ನ.ರಾ.ಪುರ.

ಸಾಕ್ಷಿ ಸಹಿಃ